ಪ್ರಶ್ನೆಯನ್ನು ಎತ್ತಿದರು. ಮಾಸ್ತಿಯವರ ಕೃತಿಗಳಲ್ಲಿ ಕೇಡಿನ ಪರಿಕಲ್ಪನೆಯನ್ನು ಕುರಿತ ಮಹತ್ವದ ಪ್ರಬಂಧವನ್ನು ಡಿಆರ್‌ಎನ್ ಮಂಡಿಸಿದರು. 'ಕನ್ನಡಿಗಳು ಸಾಕು, ಕನ್ನಡ ವಿಮರ್ಶೆ ತನ್ನ ದಾರಿಯನ್ನು ತಾನು ಕಟ್ಟಿಕೊಳ್ಳುವುದರ ಕಡೆಗೆ ಗಮನ ಹರಿಸಬೇಕು' ಎನ್ನುವ ಹೊಸದಾರಿಯ ಉದ್ಘಾಟನೆಯನ್ನು ಕೆವಿಎನ್, ಎಲಿಯೆಟ್ ಸಂಕಿರಣದಲ್ಲಿ ಮಾಡಿದರು. ಬೇಂದ್ರೆಯವರಿಗೂ ಲಂಕೇಶರಿಗೂ ಸಣ್ಣ ಮಾರಾಮಾರಿಯೇ ಆಗಿಹೋಯಿತು.

ಜಿಎಸ್‌ಎಸ್ ತಾವು ನಡೆಸಿದ ವಿಚಾರ ಸಂಕಿರಣಗಳಿಗೆ ಕರ್ನಾಟಕದಾದ್ಯಂತ ಹಳೆಯ ಹೊಸ ವಿದ್ವಾಂಸರನ್ನು ಆರಿಸಿ ಆರಿಸಿ ಕರೆದರು, ಹೊಸಬರ ಮೇಲೆ ನಂಬಿಕೆಯಿಟ್ಟು ಅವರಿಗೆ ಅವಕಾಶ ಕೊಟ್ಟು ಕನ್ನಡ ವಿಮರ್ಶಾ ಭಿತ್ತಿಯನ್ನೇ ವಿಸ್ತರಿಸಿದರು. ಅದೆಷ್ಟು ತಯಾರಿ, ಅದೆಷ್ಟು ಜವಾಬ್ದಾರಿ, ಅದೆಷ್ಟು ತಾಳ್ಮೆ, ಅದೆಷ್ಟು ಹೊಸ ಸಾಧ್ಯತೆಗಳ ಹುಡುಕಾಟ... ಕನ್ನಡದ ಬಗೆಗೆ ಅತುಲ ಪ್ರೀತಿ ಇದ್ದರೆ ಮಾತ್ರ ಇಷ್ಟೆಲ್ಲ ಮಾಡುವ ಶಕ್ತಿ ಬರಲು ಸಾಧ್ಯ. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಷೇಕ್ಸ್‌ಪಿಯರ್‌ನನ್ನು ಕುರಿತ ಒಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ದೆಹಲಿಯಿಂದ ಕನ್ನಡದ ಖ್ಯಾತ ರಂಗಕರ್ಮಿಯೊಬ್ಬರನ್ನು ಅದಕ್ಕೆ ಕರೆಸಿದ್ದರು. ಅವರೋ ಲೋಕಾಭಿರಾಮವಾದ ಮಾತುಗಳನ್ನು ಹತ್ತು ನಿಮಿಷದಲ್ಲಿ ಆಡಿ ಮುಗಿಸಿಬಿಟ್ಟರು. ಜಿಎಸ್‌ಎಸ್ ಅವರಿಗೆ ಕೋಪವೋ ಕೋಪ; ಸರ್ಕಾರಿ ಹಣವನ್ನು ಖರ್ಚು ಮಾಡಿ ಇವರನ್ನು ವಿಮಾನದಲ್ಲಿ ಅಪಾರ ಹಣ ಖರ್ಚು ಮಾಡಿ ಕರೆಸಿದರೆ, ಇವರು ಹೀಗೆ ಮೋಸ ಮಾಡುವುದೇ ಎಂದು. ಆಡಳಿತದ ನೈತಿಕತೆ, ಬೌದ್ಧಿಕ ನೈತಿಕತೆಯನ್ನು ಕುರಿತಂತೆ ಅದೆಷ್ಟು ಕಾಳಜಿ, ನಂಬಿಕೆ.



'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಪರಿಕಲ್ಪನೆ ಜಿಎಸ್‌ಎಸ್ ಅಂತಹವರಿಗೆ ಮಾತ್ರ ಹೊಳೆಯಲು ಸಾಧ್ಯ. ಕನ್ನಡ ಕಟ್ಟುವುದೆಂದರೆ, ಕನ್ನಡ ಪರಂಪರೆ, ಕನ್ನಡದ ವಿವೇಕ, ಕನ್ನಡದ ಲೋಕಗ್ರಹಿಕೆ ಎಲ್ಲವೂ ಶ್ರೀಸಾಮಾನ್ಯನಿಗೂ ತಲುಪಬೇಕು, ಅರಿವಿನ ಪ್ರಯಾಣದಲ್ಲಿ ಎಲ್ಲರೂ ಜೊತೆಗೂಡಬೇಕು. ಇಂಥ ಮಹದಾಶಯದ ಈ ಯೋಜನೆ ಇತರ ಭಾಷೆಗಳಿಗೂ ಮಾದರಿಯೇ. ಜನಪದ ಸಾಹಿತ್ಯದಿಂದ ಹಿಡಿದು, ಆಧುನಿಕ ಸಾಹಿತ್ಯದವರೆಗೆ ಕನ್ನಡ ಸಾಹಿತ್ಯದ ಎಲ್ಲ ಘಟ್ಟಗಳನ್ನೂ ಸರಳವಾಗಿ, ಆದರೆ ಅದರ ಮೈಗೆಡೆಯದಂತೆ ಪರಿಚಯಿಸುವ ಹತ್ತು ಸಂಪುಟಗಳು ಅನೇಕ ಮುದ್ರಣವನ್ನು ಕಂಡಿವೆ ಎನ್ನುವುದೇ ಇದರ ಪ್ರಸ್ತುತತೆ ಮತ್ತು ಮಹತ್ವವನ್ನು ಹೇಳುತ್ತದೆ. ಚಂಪೂ, ವಚನ, ಕೀರ್ತನೆ, ಷಟ್ಪದಿ, ಸಾಂಗತ್ಯ ಮೊದಲಾದ ಪ್ರಕಾರಗಳನ್ನು ಇಟ್ಟುಕೊಂಡು ಈ ಸಂಪುಟಗಳನ್ನು ರೂಪಿಸಲಾಗಿದೆ. ಕೊನೆಯ ಸಂಪುಟ, ಕನ್ನಡ ಸಾಹಿತ್ಯ ಸಮೀಕ್ಷೆ ಸಿಂಹಾವಲೋಕನ ಕ್ರಮದಲ್ಲಿ ಕನ್ನಡ ಸಾಹಿತ್ಯದ ವಿಶಿಷ್ಟ ಗುಣ ಲಕ್ಷಣಗಳನ್ನು ವಿವರಿಸುತ್ತದೆ.

ಜಿಎಸ್‌ಎಸ್ ಕನ್ನಡ ಮೀಮಾಂಸೆಯ ರಚನೆಯ ಕಡೆಗೆ ನಿಧಾನವಾಗಿ ಚಲಿಸಿದರು. 'ವಿಮರ್ಶೆಯ ಪೂರ್ವ ಪಶ್ಚಿಮ' ಕೃತಿ ಇವರ ಮಹಾಪ್ರಯಾಣದ ಮೊದಲ ಘಟ್ಟ. ವಿಮರ್ಶೆಯಲ್ಲಿ ಪೂರ್ವ ಪಶ್ಚಿಮಗಳ ಸಂಬಂಧಾಂತರಗಳನ್ನು ತಾತ್ವಿಕವಾಗಿ ಚರ್ಚಿಸಿದ ಈ ಕೃತಿ ಆ ಕಾಲಕ್ಕೆ ಮಾತ್ರವಲ್ಲ, ಈ ಕಾಲಕ್ಕೂ ಆಕರಗ್ರಂಥವಾಗಿ ಬಳಕೆಯಾಗುತ್ತಿದೆ. ಇದರ ಮುಂದುವರಿಕೆ ಎನ್ನುವಂತೆ ಬಂದ ಮಹತ್ವದ ಕೃತಿ 'ಕಾವ್ಯಾರ್ಥ ಚಿಂತನ'. ಕಾವ್ಯವನ್ನು ಕುರಿತಂತೆ ಪೂರ್ವ ಪಶ್ಚಿಮಗಳ ಕಲ್ಪನೆ, ಚಿಂತನೆಗಳನ್ನು ಒಟ್ಟಿಗೇ ಇಟ್ಟು